# ನಾ ಕಂಡಂತೆ ಶ್ರೀಮಾತೆ

ಮೂಲ ಬಂಗಾಳಿ : **ಸ್ವಾಮಿ ಗೌರೀಶ್ವರಾನಂದ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೨

ಸಣ್ಣಪುಟ್ಟ ವಿಷಯಗಳಲ್ಲೂ ಶ್ರೀಮಾತೆ ಅತಿಹೆಚ್ಚಿನ ಕಾಳಜಿ ವಹಿಸುತ್ತಿದ್ದರು. ಒಂದು ದಿನ ನಾನು ಊಟಕ್ಕಾಗಿ ಸಾಲವೃಕ್ಷದ ಎಲೆ[೧]ಗಳಿಗೆ ನೀರು ಚಿಮುಕಿಸಿ, ಜೋಡಿಸಿ ಇಡುತ್ತಿದ್ದೆ. ಆಗ ಶ್ರೀಮಾತೆ ಹೇಳಿದರು: ''ಹುಡುಗರು ಊಟ ಮಾಡುತ್ತಾರೆ, ಚೆನ್ನಾಗಿ ತೊಳೆದಿಡು. ಇಲ್ಲದಿದ್ದರೆ ಧೂಳು ಉಳಿದುಬಿಟ್ಟೀತು. ನನಗೆ ದೇಹದಲ್ಲಿ ಶಕ್ತಿಯಿದ್ದಾಗ ಒಂದೊಂದೇ ಎಲೆಯನ್ನು ತೊಳೆದು, ವಸ್ತ್ರದಿಂದ ಅದನ್ನು ಒರೆಸಿ ಇಡುತ್ತಿದ್ದೆ.'' ಇನ್ನೊಂದು ದಿನ ಊಟಕ್ಕೆ ಆಸನಗಳನ್ನು ಹಾಕುತ್ತಿದ್ದೆ. ಅವರು ತಮ್ಮ ಕೋಣೆಯ ಮುಂದಿನ ವರಾಂಡದಿಂದಲೇ ಅದನ್ನು ನೋಡಿ ಹೇಳಿದರು: ''ಸರಿಯಾಗಿಲ್ಲ.'' ನಾನು ಅದನ್ನು ಅಲ್ಪಸ್ವಲ್ಪ ಸರಿಸಿ, ನೇರವಾಗಿ ಮಾಡಿದ ನಂತರವೂ ಅವರು, ''ಇನ್ನೂ ಸರಿಯಾಗಿಲ್ಲ'' ಎಂದರು. ಎಲ್ಲಿ ನಾನು ತಪ್ಪಿದೆನೋ, ಸರಿಯಾಗಿ ಮಾಡಲಾಗಿಲ್ಲವೋ, ಅದನ್ನು ಅವರೇ ಒಂದು ನೇರವಾಗಿ ಮಾಡಿದರು. ಆಗ ನಾನು ನೋಡಿದೆ, ಎಲ್ಲ ಆಸನಗಳೂ ಒಂದೊಂದರ ನಡುವಿನ ಅಂತರದಲ್ಲೂ, ಮುಂಭಾಗದಲ್ಲೂ ಒಂದೇ ಸರಳ ರೇಖೆಯಂತೆ ಅಚ್ಚುಕಟ್ಟಾಗಿದ್ದವು.

ಒಂದು ದಿನ ಒಬ್ಬರು ಸ್ವಾಮೀಜಿ ಕಾಶಿಯಿಂದ ದೊಡ್ಡ ಒಂದು ಬೇಲದ ಹಣ್ಣನ್ನು ತಂದಿದ್ದರು. ಶ್ರೀಮಾತೆ ಅದನ್ನು ತಮ್ಮ ಮಂಚದ ಕೆಳಗೆ ಇಟ್ಟಿದ್ದರು. ಅವರು ಒಮ್ಮೆ ನಳಿನಿ ದೀದಿಯ ಕೋಣೆಯ ಮುಂದಿನ ವರಾಂಡದಲ್ಲಿ ತರಕಾರಿ ಹೆಚ್ಚುತ್ತಿದ್ದರು; ನಾನೂ ಅವರೊಂದಿಗೆ ತರಕಾರಿ ಹೆಚ್ಚುತ್ತಿದ್ದೆ. ಆ ಕೆಲಸ ಮುಗಿದಾಗ ಅವರು ನನಗೆ, ಆ ಬೇಲದ ಹಣ್ಣನ್ನು ತಂದುಕೊಡಲು ಹೇಳಿದರು. ಅಷ್ಟು ದೊಡ್ಡ ಬೇಲದ ಹಣ್ಣನ್ನು ನಾನು ಎಲ್ಲೂ ನೋಡಿರಲಿಲ್ಲ. ಅದು ಕುಂಬಳಕಾಯಿಯೆಂದೇ ಭಾವಿಸಿ ನಾನಂದೆ, ''ನಿಮ್ಮ ಮಂಚದ ಕೆಳಗೆ ಬೇಲದ ಹಣ್ಣು ಇಲ್ಲ, ಅಮ್ಮ.'' ಅದಕ್ಕೆ ಶ್ರೀಮಾತೆ, ''ನಾನೇ ಇಟ್ಟಿದ್ದೇನೆ. ಅದು ಎಲ್ಲಿಗೆ ಹೋದೀತು? ಚೆನ್ನಾಗಿ ನೋಡು'' ಎಂದರು. ನಾನು ಮತ್ತೆ ಹೇಳಿದೆ, ''ಇಲ್ಲಮ್ಮಾ ಬೇಲದ ಹಣ್ಣು ಇಲ್ಲಿಲ್ಲ.'' ಆಗ ಅವರೆಂದರು, ''ಮಂಚದ ಕೆಳಗೆ ಮತ್ತೇನಿದೆ?'' ನಾನಂದೆ, ''ಒಂದು ಕುಂಬಳಕಾಯಿ ಇದೆ.'' ಆಗ ಶ್ರೀಮಾತೆ ನಗತೊಡಗಿ, ''ಆ ಕುಂಬಳಕಾಯಿಯನ್ನೇ ತೆಗೆದುಕೊಂಡು ಬಾ'' ಎಂದರು. ಅದನ್ನು ಕೈಗೆ ತೆಗೆದುಕೊಂಡಾಗ ನನಗೆ ಗೊತ್ತಾಯಿತು, ಅದು ಬೇಲದ ಹಣ್ಣು ಎಂದು! ಆಗ ಶ್ರೀಮಾತೆ ಇನ್ನಷ್ಟು ನಗತೊಡಗಿದರು.



ಒಂದು ಸಲ ಪಾಬ್ನಾ[೨]ದಿಂದ ಒಂದು ದಂಪತಿಗಳು ಶ್ರೀಮಾತೆಯವರಿಂದ ದೀಕ್ಷೆ ಪಡೆಯಲು ಬಂದಿದ್ದರು. ಶ್ರೀಮಾತೆ ಎಲ್ಲರಿಗೂ ಮುಕ್ತವಾಗಿ ದೀಕ್ಷೆ ನೀಡುತ್ತಿದ್ದರು. ಅಂತೆಯೇ ಈ ದಂಪತಿಗಳಿಗೂ ನೀಡಿದರು. ಗಂಡಸಿನ ಹೆಸರು ಕಾಳೀಪದ ರಾಯ್. ಅವರು ಶಾಲೆಯೊಂದರಲ್ಲಿ ಶಿಕ್ಷಕರಾಗಿದ್ದರು. ಅವರ ಪತ್ನಿಯದು ಸಣ್ಣ ವಯಸ್ಸು. ನನ್ನ ಮುಂದೆ ಅವರು ತಲೆಯ ಮೇಲೆ ಸೆರಗನ್ನು ಎಳೆದುಕೊಂಡಿದ್ದುದನ್ನು ನೋಡಿ ಶ್ರೀಮಾತೆ ಹೇಳಿದರು: ''ನೋಡಮ್ಮಾ ಸೊಸೆ, ನಿನಗೆ ರಾಮಮಯನ ಮುಂದೆ ಕೂಡ

೧ ಮುತ್ತುಗದ ಎಲೆಗಳನ್ನು ಜೋಡಿಸಿ ಊಟದ ಎಲೆಯಾಗಿ ಬಳಸುವಂತೆ, ಬಂಗಾಳದಲ್ಲಿ ಸಾಲ ವೃಕ್ಷದ ಎಲೆಗಳನ್ನು ಜೋಡಿಸಿ ಹೊಲಿದು (ಅಥವಾ ಹೆಣೆದು) ವೃತ್ತಾಕಾರದ ಎಲೆಯಾಗಿ ಮಾಡಿ ಬಳಸುತ್ತಾರೆ. *(-ಅನು)*

೨ ಒಂದು ಊರಿನ ಹೆಸರು. *(-ಅನು)*

ನಾಚಿಕೆಯೆ? ಅವನು ನನ್ನ ಮಗಳೇ ನೋಡಮ್ಮಾ.'' ಅನಂತರ ಅವರು ನನ್ನ ಮುಂದೆ ಮುಖದ ಮೇಲೆ ಸೆರಗು ಎಳೆದುಕೊಳ್ಳಲಿಲ್ಲ. ಒಂದು ದಿನ ಅವರು ಒಂದೇ ಬಾರಿಗೆ ಮೂರು ಚಪಾತಿಗಳನ್ನು ಲಟ್ಟಿಸುತ್ತಿದ್ದುದನ್ನು ನಾನು ನೋಡಿದೆ. ಅಷ್ಟರಲ್ಲೇ ಅವರೊಂದಿಗೆ ನನಗೆ ಆತ್ಮೀಯತೆ ಬೆಳೆದುಬಿಟ್ಟಿತ್ತು. ಅವರ ಬಳಿ ಕುಳಿತು ನಾನು ಓದುತ್ತ ಹೇಳಿದೆ, ''ಅಕ್ಕಾ, ನನಗೆ ಅದನ್ನು ಕಲಿಸಿಕೊಡಿ.'' ಅದನ್ನು ಅವರು ನನಗೆ ಹೇಳಿಕೊಟ್ಟರು. ಮೊದಲು ಲಟ್ಟಿಸುವ ಮಣೆಯ ಮೇಲೆ ಸ್ವಲ್ಪ ಗೋಧಿಹಿಟ್ಟು ಹಾಕಿ, ಅದರ ಮೇಲೆ ಚಪಾತಿ ಲಟ್ಟಿಸಲು ಒಂದು ಮುದ್ದೆಯನ್ನಿಟ್ಟು ಸ್ವಲ್ಪ ಲಟ್ಟಿಸುವುದು; ಅದರ ಮೇಲೆ ಮತ್ತೆ ಗೋಧಿ ಹಿಟ್ಟು ಹಾಕಿ ಇನ್ನೊಂದು ಮುದ್ದೆ ಯನ್ನಿಟ್ಟು ಲಟ್ಟಿಸುವುದು. ಮತ್ತೆ ಅದನ್ನು ಸ್ವಲ್ಪ ಲಟ್ಟಿಸಿ, ಮತ್ತೊಂದು ಬಾರಿ ಗೋಧಿಹಿಟ್ಟು ಹಾಕುವುದು. ಕೊನೆಗೆ ಮೂರನೇ ಮುದ್ದೆಯನ್ನಿಡುವುದು. ಅದನ್ನೂ ತುಸು ಲಟ್ಟಿಸಿ, ಮತ್ತೆ ಗೋಧಿ ಹಿಟ್ಟನ್ನು ಹಾಕಿ, ಮಣೆಯ ಮೇಲೆ ಮತ್ತೆ ಚೆನ್ನಾಗಿ ಗೋಧಿ ಹಿಟ್ಟನ್ನು ಹಾಕುವುದು. ಅದರ ಮೇಲೆ ಲಟ್ಟಣಿಗೆಯಿಂದ ಲಟ್ಟಿಸಿದರೆ, ಒಟ್ಟಿಗೆ ಮೂರೂ ಚಪಾತಿಗಳು ದುಂಡಗೆ ತಯಾರಾಗುವವು. ಆಗ ಕೈಯಿಂದ ಅದನ್ನು ತಿರುಗಿಸುವ ಅಗತ್ಯವಿಲ್ಲ. ಹೀಗೆ ಆ ಮುದ್ದೆಗಳು ತೆಳ್ಳನೆಯ ಒಂದೇ ಆಕಾರದ ಚಪಾತಿಗಳಾದಾಗ, ನಡುವೆ ಉಳಿಯುವ ಹೆಚ್ಚಿನ ಗೋಧಿ ಹಿಟ್ಟನ್ನು ಕೈಯಿಂದ ತಟ್ಟಿ ಹೋಗಲಾಡಿಸಬಹುದು. ಕಲಿಸಿದ್ದಾಯಿತು; ಅದನ್ನು ಮಾಡಲು ಹೊರಟಾಗ ಮೂರು ಚಪಾತಿಗಳೂ ಒಂದೇ ಆಗಿ ಬಿಡುತ್ತಿದ್ದವು. ಹೆಚ್ಚು ಗೋಧಿ ಹಿಟ್ಟನ್ನು ಹಾಕಿ ಮಾಡಿದಾಗ ಮೂರು ಚಪಾತಿಗಳಾದವು; ಆದರೆ ಆಕಾರ ಮಾತ್ರ ಭಾರತದ ಭೂಪಟದಂತೆ ಆಗಿಬಿಟ್ಟಿದ್ದವು, ದುಂಡಗೆ ಆಗಲಿಲ್ಲ. ಮತ್ತೆ ಮತ್ತೆ ಶ್ರಮಪಟ್ಟು ಮಾಡಿದ ನಂತರ ಮೂರು ಒಳ್ಳೆಯ ಆಕಾರದ ಚಪಾತಿಗಳಾದವು.

ಒಂದು ದಿನ ಪುರುಷ ಭಕ್ತರು ಬಹಳ ಮಂದಿ ಇದ್ದರು; ಭಕ್ತೆಯರು ಯಾರೂ ಇರಲಿಲ್ಲ. ಶ್ರೀಮಾತೆ ಸಾಕಷ್ಟು ಗೋಧಿ ಹಿಟ್ಟು ಕಲಸಲು ಕೊಟ್ಟರು. ನಾನು ಹಿಟ್ಟು ಕಲಸಿ, ಚಪಾತಿ ಲಟ್ಟಿಸಿ ಕೊಟ್ಟೆ. ಶ್ರೀಮಾತೆ ನಳಿನಿ ದೀದಿಗೆ ಹೇಳಿದರು, ''ನಳಿನಿ ನೀನು ಚಪಾತಿ ಬೇಯಿಸು. ನಾನು ಮತ್ತು ರಾಮಮಯ ನಿನಗೆ ಲಟ್ಟಿಸಿ ಕೊಡುತ್ತೇವೆ.'' ಶ್ರೀಮಾತೆ ಸಣ್ಣ ಹಾಗೂ ಬೆಣಚುಕಲ್ಲಿನ ಮಣೆಯ ಮೇಲೆ ಎಬನಿ ಮರದ ಸಣ್ಣ ಲಟ್ಟಣಿಗೆಯಿಂದ ಒಂದೊಂದಾಗಿ ಚಪಾತಿ ಲಟ್ಟಿಸಿ ಕೊಡುತ್ತಿದ್ದರು. ನಾನು ದೊಡ್ಡ, ಮರದ ಮಣೆಯ ಮೇಲೆ ದೊಡ್ಡ ಲಟ್ಟಣಿಗೆಯಿಂದ ಒಟ್ಟಿಗೆ ಮೂರು ಚಪಾತಿ ಲಟ್ಟಿಸಿ ಕೊಡುತ್ತಿದ್ದೆ. ಕೆಲಸ ಚೆನ್ನಾಗಿ ನಡೆಯುತ್ತಿತ್ತು. ಆಗ ನಳಿನಿ ದೀದಿ ಹೇಳಿದಳು, ''ಅತ್ತೆ, ನಿನಗಿಂತ ರಾಮಮಯನ ಚಪಾತಿ ಚೆನ್ನಾಗಿ ಆಗುತ್ತಿವೆ.'' ಅಷ್ಟು ಹೇಳಿದಳೋ ಇಲ್ಲವೋ, ಶ್ರೀಮಾತೆ ಕೋಪಗೊಂಡು ತಮ್ಮ ಚಪಾತಿ ಮಣೆ, ಲಟ್ಟಣಿಗೆಗಳನ್ನು ಬದಿಗೆ ಸರಿಸಿ ಕುಳಿತರು. ಅವರೆಂದರು, ''ನಾನು ಚಪಾತಿ ಲಟ್ಟಿಸುತ್ತಲೇ ಮುದುಕಿಯಾಗಿಬಿಟ್ಟೆ. ರಾಮಮಯ ಇನ್ನೂ ಹಾಲು ಕುಡಿಯುವ ಎಳೆಯ ಮಗು; ಗಂಟಲು ಹಿಡಿದುಕೊಂಡರೆ ಬಾಯಿಯಿಂದ ಹಾಲು ಹೊರಗೆ ಚೆಲ್ಲೀತು — ಅವನು ನನಗಿಂತ ಚೆನ್ನಾಗಿ ಚಪಾತಿ ಮಾಡುತ್ತಾನಂತೆ! ನಾನು ಇನ್ನು ಚಪಾತಿ ಮಾಡಲಾರೆ. ಅವನೇ ಮಾಡಲಿ.'' ಅವರು ಮಣೆ, ಲಟ್ಟಣಿಗೆ ಸರಿಸಿ ಕುಳಿತುಬಿಟ್ಟಿದ್ದರು. ನಾನೂ ಲಟ್ಟಣಿಗೆ, ಮಣೆಗಳನ್ನು ಬದಿಗೆ ಸರಿಸಿ ನಿಂತುಬಿಟ್ಟೆ; ಶ್ರೀಮಾತೆಗೆ ಹೇಳಿದೆ: ''ನೀವು ಲಟ್ಟಿಸದಿದ್ದರೆ ನಾನೂ ಲಟ್ಟಿಸಲಾರೆ — ನಾನು ಹೊರಟೆ.'' ಶ್ರೀಮಾತೆ ಗಮನಿಸಿದರು, ಇಬ್ಬರೂ ಸೇರಿ ಲಟ್ಟಿಸಿದರೆ ಬೇಗನೆ ಕೆಲಸ ಮುಗಿದೀತು, ಶ್ರೀರಾಮಕೃಷ್ಣರಿಗೆ ನೈವೇದ್ಯ ಬೇಗನೆ ಮಾಡಿ, ಹುಡುಗರಿಗೆ ಪ್ರಸಾದ (ಊಟ) ಮಾಡಿಸಲು ತಡವಾಗಲಾರದು. ಆದ್ದರಿಂದ ಅವರು ಲಟ್ಟಿಸಲು ಆರಂಭಿಸಿದರು. ನಾನು ನಳಿನಿ ದೀದಿಗೆ ಬೈದೆ: ''ನಾವಿಬ್ಬರೂ ಒಟ್ಟಿಗೆ ಚಪಾತಿ ಮಾಡಿಕೊಡುತ್ತಿದ್ದೇವೆ; ಯಾವುದು ಅತ್ತೆಯದು, ಯಾವುದು ರಾಮಮಯನದು ಅಂತ ನಿನಗೆ ಹೇಗೆ ಗೊತ್ತು? ಎಂದಿಗಾದರೂ ನನಗೆ ತಾಯಿಗಿಂತ ಚೆನ್ನಾಗಿ ಲಟ್ಟಿಸುವುದು ಸಾಧ್ಯವೆ? ನೀನೇಕೆ ಅನಗತ್ಯವಾಗಿ ಹೋಲಿಕೆ ಮಾಡುತ್ತೀಯಾ?''

ಈಗ ನನಗೆ ೮೮ ವರ್ಷ ವಯಸ್ಸು. ಶ್ರೀಮಾತೆ ಯಾಕೆ ಆ ರೀತಿ ಕೋಪಿಸಿಕೊಂಡರು ಎಂದು ಯೋಚಿಸಿದಾಗ, ಅದಕ್ಕೆ ಶಾಸ್ತ್ರಗಳಲ್ಲಿ ಕಾರಣ ಹುಡುಕುತ್ತ ಹೋದರೆ ಅದು ಒಂದು ರೀತಿಯ ವಿಚಿತ್ರ ವರ್ತನೆಯೆಂಬಂತೆ ತಿಳಿದುಬರುತ್ತದೆ. ಕೆಲವು ಬಾರಿ ಚಿಕ್ಕ ಮಕ್ಕಳಂತೆ, ಕೆಲವೊಮ್ಮೆ ಜ್ಞಾನಿಗಳಂತೆ ಅವರು ವರ್ತಿಸುತ್ತಾರೆ. ಅನಾಯಾಸವಾಗಿ ಎಲ್ಲರಿಗೂ ಬೋಧನೆ ನೀಡುತ್ತಾರೆ, ಎಲ್ಲರ ಪ್ರಶ್ನೆಗಳಿಗೂ ಉತ್ತರ ನೀಡುತ್ತಾರೆ. ಅದೇ ರೀತಿ ಚಿಕ್ಕ ಮಕ್ಕಳಂತೆಯೂ ವರ್ತಿಸುತ್ತಾರೆ.

ಶ್ರೀಮಾತೆಯವರ ಖರ್ಚು ವೆಚ್ಚಗಳಿಗೆ ಹಣ ಸಾಕಾಗುತ್ತಿತ್ತು ನಿಜ, ಆದರೆ ಅವರ ಬಳಿ ಎಂದೂ ಹೆಚ್ಚು ಹಣವಿರುತ್ತಿರಲಿಲ್ಲ. ಒಂದು ಸಲ ಹಣದ ಪೆಟ್ಟಿಗೆಯನ್ನು ತೆರೆದು ನೋಡಿ, ಅದರಲ್ಲಿ ಎಷ್ಟು ಹಣವಿದೆ ಎಂದು ನೋಡಲು ನನಗೆ ಹೇಳಿದರು. ನಾನಂದೆ, ''ಹನ್ನೊಂದು ರೂಪಾಯಿ ಇದೆ.'' ಅದೆಲ್ಲವನ್ನೂ ನನಗೆ ಕೊಟ್ಟು, ''ಒಂದು ರೂಪಾಯಿಗೆ ಎಣ್ಣೆ, ಒಂದು ರೂಪಾಯಿಗೆ ಗೋಧಿ ಹಿಟ್ಟು, ಎರಡು ರೂಪಾಯಿಗೆ ತುಪ್ಪ — ಇದನ್ನೆಲ್ಲ ಕೊಂಡುಕೊಂಡು ಬಾ'' ಎಂದರು. ಅದಕ್ಕೆ ನಾನು, ''ಇಲ್ಲಮ್ಮ, ನೀವು ಹೇಳಿದ್ದನ್ನು ಬರೆದುಕೊಂಡು ಹೋಗುತ್ತೇನೆ. ಅನಂತರ ಐದು ಸೇರು, ಎರಡೂವರೆ ಸೇರು — ಈ ರೀತಿ ಕೊಂಡುಕೊಂಡು ಬರುತ್ತೇನೆ. ಅದರಿಂದ ಲೆಕ್ಕ ಮಾಡುವುದು ಸುಲಭ'' ಎಂದೆ. ಶ್ರೀಮಾತೆ ತುಂಬ ಸಂತೋಷ ಪಟ್ಟು, ''ಆಗಲಿ, ಮಗೂ. ನೀನು ಬುದ್ಧಿವಂತ ಹುಡುಗ. ನಿನಗೆ ಹೇಗೆ ಇಷ್ಟವೋ ಹಾಗೆ ಲೆಕ್ಕಮಾಡಿ, ಅದನ್ನೆಲ್ಲ ಕೊಂಡುಕೊಂಡು ಬಾ. ನನಗೆ ಆ ರೀತಿ ಲೆಕ್ಕ ಮಾಡುವುದಕ್ಕೆ ಬರುವುದಿಲ್ಲ, ಮಗೂ'' ಎಂದರು. ಯಾವಾಗಲಾದರೂ ಒಮ್ಮೆ ಹಣ ಮುಗಿದು ಹೋದರೆ ಹೇಳುತ್ತಿದ್ದರು, ''ಇವತ್ತು

ಇಂಗ್ಲಿಷ್ ತಿಂಗಳ ಪ್ರಕಾರ ಯಾವ ತಾರೀಕು?'' ಇಪ್ಪತ್ತೇಳು ಎಂದು ನಾನು ಹೇಳಿದರೆ, ''ಇನ್ನೆಷ್ಟು ದಿನ ಉಳಿದಿದೆ?'' ಎಂದು ಕೇಳುತ್ತಿದ್ದರು. ನಾಲ್ಕು ದಿನ ಉಳಿದಿದೆ ಎಂದು ನಾನು ಹೇಳಿದಾಗ, ''ಇನ್ನೇನು ಮತ್ತೆ? ಕೆಲವೇ ದಿನಗಳಲ್ಲಿ ಇಂದುವಿನ ಹಣ ಬರಬಹುದು, ಮಾಸ್ಟರನ (ಮ–ಮಹೇಂದ್ರನಾಥ ಗುಪ್ತ, 'ಶ್ರೀರಾಮಕೃಷ್ಣ ವಚನವೇದ'ದ ಕರ್ತೃ) ಐದು ರೂಪಾಯಿ ಬರುವುದು. ಆಗ ಹೆಚ್ಚು ಕೊಂಡುಕೊಳ್ಳಬಹುದು'' ಎನ್ನುತ್ತಿದ್ದರು. ರಾಂಚಿಯಲ್ಲಿದ್ದ ಇಂದು ಬಾಬು ಆಗ ಪ್ರತಿ ತಿಂಗಳೂ ಸರಿಯಾಗಿ ಒಂದನೇ ತಾರೀಖು, ತಪ್ಪಿದರೆ ಎರಡನೇ ತಾರೀಖಿನಂದು ಶ್ರೀಮಾತೆಯವರಿಗೆ ೧೫ ರೂಪಾಯಿ ಕಳುಹಿಸಿಕೊಡುತ್ತಿದ್ದರು. ಮಾಸ್ಟರ್ ಮಹಾಶಯ ಕೂಡ ೫ ರೂಪಾಯಿ ಕಳುಹಿಸುತ್ತಿದ್ದರು. ಆಗ ಆ ಭಾಗದಲ್ಲೆಲ್ಲ ಒಂದು ಮಣ ಅಕ್ಕಿಗೆ ಎರಡು ರೂಪಾಯಿ ಬೆಲೆ ಇತ್ತು.

ನಮ್ಮ ಹೆಡ್ ಮಾಸ್ಟರ್ ಆಗಿದ್ದ ಪ್ರಬೋಧಬಾಬು ಅವರನ್ನು ಇಂದು ಬಾಬು ಒಂದು ಸಲ ಜಯರಾಮಬಾಟಿಯಲ್ಲಿ ಭೇಟಿಯಾಗಿದ್ದರು. ಅವರಿಬ್ಬರೂ ತುಂಬಾ ಮಾತುಕತೆ ನಡೆಸುತ್ತಿದ್ದರು. ಎರಡು–ಮೂರು ದಿನಗಳ ನಂತರ ಪ್ರಬೋಧಬಾಬು ಕೋಯಲ್‌ಪಾರಾಗೆ ಹೋಗಿ ಅಲ್ಲಿ ತಂಗಲು ಬಯಸಿದ್ದರು. ಅಲ್ಲಿ ಹೆಚ್ಚು ಜನ ಹೋಗಿ ಇದ್ದುಬಿಟ್ಟರೆ ಶ್ರೀಮಾತೆಯವರಿಗೆ ಕಷ್ಟವಾಗುತ್ತಿತ್ತು. ಆದರೆ ಶ್ರೀಮಾತೆ ಹೇಳಿದರು, ''ಕೋಯಲ್‌ಪಾರಾದಲ್ಲಿ ಏಕೆ ತಂಗುತ್ತೀಯಾ? ಇಲ್ಲೇ ಇದ್ದುಬಿಡು. ಎರಡು ಹೊತ್ತು ಊಟ, ಅದೇನೂ ಅಲ್ಲ. ನನಗೆ ಸ್ವಲ್ಪವೂ ಕಷ್ಟವಾಗದು. ನೀವಿಬ್ಬರೂ ತುಂಬಾ ಆತ್ಮೀಯರಾಗಿ ಬಿಟ್ಟಿದ್ದೀರಿ. ಇಂದು ಎಷ್ಟು ದಿನ ಇಲ್ಲಿರುತ್ತಾನೋ, ನೀನೂ ಅಲ್ಲಿಯವರೆಗೆ ಇಲ್ಲೇ ಇದ್ದುಬಿಡು.'' ನಾನು ಅಡಿಗೆಗೋಸ್ಕರ ಕಟ್ಟಿಗೆಯನ್ನು ಸಣ್ಣ ಸಣ್ಣದಾಗಿ ಸೀಳಿಹಾಕುತ್ತಿದ್ದೆ. ಪ್ರಬೋಧಬಾಬು 'ನನಗೆ ಕೊಡು' ಎನ್ನುತ್ತ ಒಂದೆರಡು ಕಟ್ಟಿಗೆ ಸೀಳುತ್ತಿರುವಾಗಲೆ, ಶ್ರೀಮಾತೆ ತಾವೇ ಪಡಸಾಲೆಯ ಸಮೀಪ ಬಂದು, ''ಬೇಡ ಮಗೂ! ನೀನು ಅದನ್ನು ಮಾಡಲಾರೆ. ರಾಮಮಯನಿಗೆ ಅಭ್ಯಾಸವಿದೆ, ಅವನೇ ಮಾಡಲಿ. ನಿನಗೆ ವಯಸ್ಸಾಗಿದೆ, ಕೈನೋವು ಬಂದೀತು'' ಎಂದರು. ಆಗ ನಮ್ಮ ಮಾಸ್ಟರರು ಹೇಳಿದರು, ''ನಾವು gentlemen! disqualified! (ನಾವು ಸಂಭಾವಿತರು, ಅನರ್ಹರು) ಸ್ವಲ್ಪವಾದರೂ ಶ್ರಮವಹಿಸಿ ತಾಯಿಯ ಸೇವೆ ಮಾಡುವ ಅಧಿಕಾರ ನಮಗಿಲ್ಲ!''

ಒಂದು ದಿನ ಶ್ರೀಮಾತೆಯವರ ಪೆಟ್ಟಿಗೆಯಲ್ಲಿದ್ದ ಬಟ್ಟೆಬರೆ ಎಲ್ಲವನ್ನೂ ಹೊರತೆಗೆದು ಬಿಸಿಲಿಗೆ ಹಾಕುತ್ತಿದ್ದೆ. ಅದರಲ್ಲೊಂದು ಹರಿದ ಸೀರೆಯಿತ್ತು, ಅದು ಅಸ್ಸಾಮಿನ 'ಎಂಡಿ' ಅಥವಾ 'ಮುಗಾ'[೩] ಹತ್ತಿಯಿಂದ ಮಾಡಿದ ಸೀರೆಯಿರಬೇಕು, ನನಗೆ ಸರಿಯಾಗಿ ಗೊತ್ತಾಗಲಿಲ್ಲ. ಸೀರೆ ತುಸು ಹರಿದಿದ್ದನ್ನು ನೋಡಿ ನಾನಂದೆ, ''ಅಮ್ಮಾ, ಈ ಸೀರೆ ಹರಿದುಹೋಗಿದೆ. ಇದನ್ನು ನಾನು ಬಿಸಾಡಿ ಬಿಡುತ್ತೇನೆ, ಆಗದೆ?'' ಅದಕ್ಕೆ ಶ್ರೀಮಾತೆ, ''ಬೇಡ ಮಗೂ, ಬಿಸಾಡಬೇಡ. ಅದನ್ನು ಖುಕಿ[೪] ತುಂಬಾ ಭಕ್ತಿ–ಆದರಗಳಿಂದ ನನಗೆ ಕೊಟ್ಟಿದ್ದಾಳೆ. ಹಲವು ದಿನ ನಾನು ಅದನ್ನು ಉಟ್ಟಿದ್ದೆ'' ಎಂದರು. ಖುಕಿ ಎಂದರೆ ಸೋದರಿ ನಿವೇದಿತಾ. ಶ್ರೀಮಾತೆಗೆ ಸೋದರಿ ನಿವೇದಿತಾ ಮೇಲೆ ತುಂಬಾ ಪ್ರೀತಿಯಿತ್ತು. ಸ್ವಾಮೀಜಿ ಅವಳನ್ನು ಶ್ರೀಮಾತೆಯವರ ಬಳಿಗೆ ಕಳುಹಿಸಿದ ದಿನ ಅವಳಿಗೆ ತುಂಬ ಭಯವಾಗಿತ್ತು. ಶ್ರೀಮಾತೆ ಹಳ್ಳಿ ಹೆಂಗಸು; ತನ್ನನ್ನು ಮ್ಲೇಚ್ಛಳೆಂದು ಭಾವಿಸಿ ದೂರ ಓಡಿಸಿಬಿಟ್ಟಾರೆಂದು ಆಕೆ ಭಯಪಟ್ಟಿದ್ದಳು. ಅಲ್ಲದೆ ಶ್ರೀಮಾತೆಗೆ ಇಂಗ್ಲಿಷ್ ಬರುತ್ತಿರಲಿಲ್ಲ; ತನಗೂ ಬಂಗಾಳಿ ತಿಳಿಯದು. ಅದಕ್ಕಾಗಿ ದ್ವಿಭಾಷಿಯ ಕೆಲಸ ಮಾಡುವುದಕ್ಕಾಗಿ ಸ್ವಾಮೀಜಿ ತಮ್ಮ ಶಿಷ್ಯ ಸ್ವರೂಪಾನಂದರನ್ನು ಅವಳೊಂದಿಗೆ ಕಳುಹಿಸಿಕೊಟ್ಟಿದ್ದರು. ಅವರು ತಾವಾಗಿಯೇ ಶ್ರೀಮಾತೆಯವರಿಗೆ ಸೋದರಿ ನಿವೇದಿತೆಯ ಪರಿಚಯ ಮಾಡಿಕೊಟ್ಟಾಗ, ಶ್ರೀಮಾತೆ ತುಂಬ ಸಂತಸಪಟ್ಟರು. ಅವಳ ಹೆಸರೇನೆಂದು ಶ್ರೀಮಾತೆ ಕೇಳಿದಾಗ, ನಿವೇದಿತಾ ಇಂಗ್ಲಿಷಿನಲ್ಲಿ ''ನನ್ನ ಹೆಸರು ಮಾರ್ಗರೆಟ್ ಎಲಿಜಬೆತ್ ನೋಬೆಲ್'' ಎಂದು ಹೇಳಿದಳು. ಆಗ ಶ್ರೀಮಾತೆ, 'ಮಗೂ, ಅಷ್ಟು ದೊಡ್ಡ ಹೆಸರು ನನಗೆ ನೆನಪಿನಲ್ಲಿ ಉಳಿಯದು. ನಾನು ನಿನ್ನನ್ನು 'ಖುಕಿ' ಎಂದೇ ಕರೆಯುತ್ತೇನೆ'' ಎಂದರು. ಆಗ ಸ್ವರೂಪಾನಂದಜಿ ಅದು ನಿವೇದಿತೆಗೆ ಅರ್ಥವಾಗುವಂತೆ ಇಂಗ್ಲಿಷಿಗೆ ಅನುವಾದಿಸಿ ಹೇಳಿದರು: '' Mother will not be able to utter such a big name, she will call you 'baby'.'' ಆಗ ನಿವೇದಿತಾ ತುಂಬಾ ಆನಂದಗೊಂಡು ಹೇಳತೊಡಗಿದಳು, '' Yes, yes, I am mother's baby.'' ಅವಳು ಸ್ವಾಮೀಜಿ ಬಳಿಗೆ ಹೋಗಿ ಆನಂದದಿಂದ ಚಿಮ್ಮುತ್ತ ಹೇಳಿದಳು, ''ಶ್ರೀಮಾತೆ ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದರು. ಅವರ ಪಾದಗಳನ್ನು ಸ್ಪರ್ಶಿಸಿ ಪ್ರಣಾಮ ಮಾಡಲು ಬಿಟ್ಟರು. ಪ್ರಸಾದ ಕೊಟ್ಟರು, ಅಲ್ಲದೆ ನನ್ನನ್ನು 'ಖುಕಿ' ಎಂದು ಕರೆಯುವುದಾಗಿ ಹೇಳಿದರು.'' ಶ್ರೀಮಾತೆಯವರೊಂದಿಗೆ ನೇರ ಮಾತನಾಡಬೇಕೆಂದು ನಿವೇದಿತಾ, ಸ್ವಾಮಿ ಸ್ವರೂಪಾನಂದರಿಂದ ಬಂಗಾಳಿ ಕಲಿತಳು. ಹೀಗೆ ಶ್ರೀಮಾತೆ ಎಲ್ಲರನ್ನೂ ಪ್ರೀತಿಸುತ್ತಿದ್ದರು, ಎಲ್ಲರನ್ನೂ ಆದರಿಸುತ್ತಿದ್ದರು.

ಶ್ರೀಮಾತೆ ಹಾಡುಗಳನ್ನು ತುಂಬ ಇಷ್ಟಪಡುತ್ತಿದ್ದರು. ಒಂದು ಸಲ ಇಂದ್ರದಯಾಲ ಬಾಬು (ಮುಂದೆ ಸ್ವಾಮಿ ಪ್ರೇಮೇಶಾನಂದರು), ಮೋಕ್ಷದಾ ಬಾಬು ಮುಂತಾದ ಕೆಲವರು ಜಯರಾಂಬಾಟಿಗೆ ಬಂದಿದ್ದರು. ಅವರೆಲ್ಲ ಹಲವಾರು ಹಾಡುಗಳನ್ನು ಶ್ರೀಮಾತೆಯವರ ಮುಂದೆ ಹಾಡಿದ್ದರು. ಶ್ರೀಮಾತೆ ಕೂಡ ತುಂಬ ಆನಂದದಿಂದ ಅದನ್ನು ಆಲಿಸಿದರು. ಕೊನೆಯಲ್ಲಿ ಎಲ್ಲರೂ ಶ್ರೀಮಾತೆಯವರ ಸುತ್ತ ಸುತ್ತಿಕೊಂಡು ನರ್ತಿಸುತ್ತ ಕೂಡ ಕೀರ್ತನೆಯನ್ನು ಹಾಡಿದರು. ಒಂದು ಸಲ ವಿಶು–ದಾ

೩. ಅಸ್ಸಾಮಿನಲ್ಲಿ ಈ ಬಗೆಯ ಹತ್ತಿಯಿಂದ ಬಟ್ಟೆ ತಯಾರಿಸುತ್ತಾರೆ.

೪ ಬಂಗಾಳಿಯಲ್ಲಿ ಖುಕಿ ಎಂದರೆ ಮಗು ಎಂದರ್ಥ.

(ಸ್ವಾಮಿ ಜಪಾನಂದರು) ಜಯರಾಮಬಾಟಿಯಲ್ಲಿ ಹಲವು ಹಾಡುಗಳನ್ನು ಹಾಡಿದ್ದರು. ನಮ್ಮ ಹೆಡ್ ಮಾಸ್ಟರ್ ಪಖವಾಜ್ ಬಾರಿಸಿದ್ದರು. ರಾತ್ರಿ ಬಹಳ ಹೊತ್ತಿನವರೆಗೂ ಅವರು ಹಾಡುತ್ತಿದ್ದರು; ಅದನ್ನು ಕೇಳಿ ತುಂಬ ಆನಂದಗೊಂಡಿದ್ದರು. ಹಳ್ಳಿಯ ಜನ ತುಂಬಾ ಮಂದಿ ಅಲ್ಲಿ ನೆರೆದಿದ್ದರು.

ಒಬ್ಬಾಕೆ ಭಕ್ತೆ ಶ್ರೀಮಾತೆಯವರ ಸೇವೆ ಮಾಡುವ ಬಗ್ಗೆ ಮಾತು ಬಂದಾಗ ಶ್ರೀಮಾತೆ ಈ ರೀತಿ ಹೇಳಿದರು: ''ಬೇಡ ಮಗೂ! ಇಲ್ಲಿ ಶ್ರೀರಾಮಕೃಷ್ಣರ ಪೂಜೆ ನಡೆಯುತ್ತಿದೆ. ಹಾಗಾಗಿ ಸಾಧ್ಯವಿಲ್ಲ. ನಾನು ಸತ್ಯವಂತರ ತಾಯಿ, ಅಸತ್ಯವಂತರ ತಾಯಿ ಕೂಡ. ಅಂತೆಯೇ ಸತಿಯರ ತಾಯಿ, ಅಸತಿಯರ ತಾಯಿ ಕೂಡ. ಆದರೆ ಆ ರೀತಿ ಠಾಕೂರರ ಸೇವೆ ನಡೆಯಲಾರದು. ಮೂಳೆ ತನಕವೂ ಪರಿಶುದ್ಧರಾಗಿರುವ ಹೆಂಗಸು ಯಾರಿದ್ದಾರೆ? ಬೆರಳೆಣಿಕೆಯಷ್ಟು ಜನ ಮಾತ್ರ.''

ಜಯರಾಂಬಾಟಿಯಲ್ಲಿ ಪೂಜ್ಯ ಶರತ್ ಮಹಾರಾಜರನ್ನು ಮೊದಲ ಬಾರಿ ನೋಡಿದಾಗ, ಅವರ ವಿಶಾಲ ದೇಹವನ್ನು ದೂರದಿಂದ ನೋಡಿ ಅವರ ಸಮೀಪ ಹೋಗಲು ನನಗೆ ಭಯವಾಗಿತ್ತು. ಹಾಗಾಗಿ ಅವರನ್ನು ರಸ್ತೆಯಿಂದಲೇ ನೋಡಿ, ನೇರವಾಗಿ ಶ್ರೀಮಾತೆಯವರ ಬಳಿಗೆ ಹೋಗಿದ್ದೆ. ಶ್ರೀಮಾತೆಗೆ ಪ್ರಣಾಮ ಮಾಡಿದಾಗ ಅವರು ಸಂತೋಷಗೊಂಡು, ''ರಾಮಮಯ, ಶರತ್ ಬಂದಿದ್ದಾನೆ, ನೋಡಿದೆಯ?'' ಎಂದರು. ''ಹೌದಮ್ಮಾ. ದೂರದಿಂದ ನೋಡಿದೆ'' ಎಂದೆ ನಾನು. ಅದಕ್ಕೆ ಅವರು, ''ಹತ್ತಿರ ಹೋಗಿಲ್ಲವೆ? ಪ್ರಣಾಮ ಮಾಡಿಲ್ಲವೆ?'' ಎಂದು ಕೇಳಿದರು. ''ಇಲ್ಲಮ್ಮಾ, ನನಗೆ ಭಯವಾಗುತ್ತದೆ'' ಎಂದೆ. ಆಗ ಶ್ರೀಮಾತೆ, ''ಪೆದ್ದು ಹುಡುಗ! ಶರತ್‌ನನ್ನು ನೋಡಿದರೆ ಭಯವೆ? ಅವನು ನಿನ್ನನ್ನು ಎಷ್ಟೊಂದು ಪ್ರೀತಿಸುತ್ತಾನೆ, ನೋಡು. ಹೋಗು ಅವನ ಬಳಿಗೆ'' ಎಂದರು. ನಾನು ಶ್ರೀಮಾತೆಯವರ ಮನೆಯಿಂದ ಶರತ್ ಮಹಾರಾಜರ ಬಳಿಗೆ ಹೋಗಿ ಪ್ರಣಾಮ ಮಾಡಿದೆ. ಅವರು ನನ್ನ ಹೆಸರೇನು, ಮನೆಯೆಲ್ಲಿ, ಜಯರಾಮಬಾಟಿಗೆ ಏಕೆ ಬಂದೆ, ಹತ್ತಿರದ ಸಂಬಂಧಿಕರು ಇದ್ದಾರೆಯೆ — ಇತ್ಯಾದಿ ಪ್ರಶ್ನೆಗಳನ್ನು ಕೇಳಿದರು. ನಾನು ತುಂಬ ಚಿಕ್ಕವನಾದ್ದರಿಂದ, ಶ್ರೀಮಾತೆಯವರನ್ನು ನೋಡುವುದಕ್ಕಾಗಿಯೇ ಅವರ ಬಳಿಗೆ ಬಂದೆ ಎಂದು ಅವರು ತಿಳಿದಿಲ್ಲ ಎಂದು ಭಾವಿಸಿ ಹೇಳಿದೆ, ''ಪ್ರತಿ ಶನಿವಾರ ನಾನು ಶ್ರೀಮಾತೆಯವರ ಬಳಿಗೆ ಬರುತ್ತೇನೆ. ಸೋಮವಾರ ಮತ್ತೆ ಶಾಲೆಗೆ ಹೋಗುತ್ತೇನೆ.'' ಆಗ ಅವರಿಗೆ ಎಲ್ಲ ಅರ್ಥವಾಯಿತು. ಅವರ ಮಾತುಗಳು ಎಷ್ಟೊಂದು ಪ್ರೀತಿಯಿಂದ ತುಂಬಿಕೊಂಡಿದ್ದವೆಂದರೆ, ನನಗೆ ತುಂಬಾ ಆನಂದವಾಯಿತು.

ಕೆಲವು ನಿಮಿಷಗಳ ನಂತರ ಶ್ರೀಮಾತೆ ನನ್ನ ಹೆಸರನ್ನು ಕೂಗಿ ಕರೆದರು. ಅವರ ಬಳಿಗೆ ಹೋದಾಗ ಅವರು ನನಗೆ ಊಟ ಬಡಿಸಿದರು. ಶ್ರೀಮಾತೆಗೆ ನಾನು ಅಷ್ಟೊಂದು ಪ್ರೀತಿಪಾತ್ರನಾಗಿದ್ದೇನೆ ಎಂದು ಆಗ ಶರತ್ ಮಹಾರಾಜರಿಗೆ ಅರ್ಥವಾಯಿತು. ನಾನು ಅಲ್ಲಿನ ಮನೆಮಂದಿಯವರೊಂದಿಗೆ ಬಹಳ ಪರಿಚಿತನಾಗಿದ್ದುದನ್ನು ತಿಳಿದ ಅವರು ಹೇಳಿದರು, ''ನೋಡು, ಶ್ರೀಮಾತೆ ಯಾವಾಗ ಏನು ಮಾಡುತ್ತಾರೆ ಎಂಬುದನ್ನು ನೋಡು. ಅವರಿಗೆ ಕೆಲಸವಿಲ್ಲದ ಸಮಯ ಯಾವುದು ಅಂತ ನೋಡು, ಆಗ ನನಗೆ ಬಂದು ಹೇಳು. ನಾನು ಅವರಿಗೆ ಪ್ರಣಾಮ ಮಾಡಲು ಹೋಗಬೇಕಲ್ಲ , ಆಗ ನೀನು ಅವರ ಬಳಿಗೆ ಹೋಗಿ, ಕೇಳಿಕೊಂಡು ಬರಲು ಹೇಳುತ್ತೇನೆ. ನೋಡು, ನಾನು ಏನು ಹೇಳುತ್ತೇನೋ ಹಾಗೇ ಮಾಡಬೇಕು. ನಿನ್ನ ಸ್ವಂತ ಬುದ್ಧಿ ಉಪಯೋಗಿಸಬೇಡ.'' ಶ್ರೀಮಾತೆಯವರಿಗೆ ಕೆಲಸವಿದ್ದಾಗ ನಾನು ಹೋಗಿ ಇವರ ಪ್ರಣಾಮದ ವಿಷಯ ಹೇಳಬಾರದು ಎನ್ನುವುದಕ್ಕಾಗಿ ಹೀಗೆ ಎಚ್ಚರಿಕೆ ನೀಡಿದರು ಎಂದು ನನಗರ್ಥವಾಯಿತು. ಅವರ ಆದೇಶದಂತೆಯೇ ನಾನು ಅವರ ಬಳಿಗೆ ಹೋಗಿ, ''ಮಹಾರಾಜ್, ಶ್ರೀಮಾತೆ ಈಗ ತರಕಾರಿ ಹೆಚ್ಚುವುದನ್ನು ಮುಗಿಸಿ ತಮ್ಮ ಕೋಣೆಯಲ್ಲಿ ಕುಳಿತಿದ್ದಾರೆ'' ಎನ್ನುತ್ತಿದ್ದೆ. ಅದನ್ನು ಕೇಳಿ ಮಹಾರಾಜ್, ''ಶ್ರೀಮಾತೆಯವರ ಬಳಿಗೆ ಹೋಗಿ ಕೈಜೋಡಿಸಿ ಕೇಳಿ ಬಾ, ನಾನು ಈಗ ಪ್ರಣಾಮ ಮಾಡಲು ಬರಬಹುದೇ ಅಂತ'' ಎನ್ನುತ್ತಿದ್ದರು. ಶ್ರೀಮಾತೆಯವರನ್ನು ಕೇಳಿದ ಕೂಡಲೇ ಅವರು, ''ಆಗಲಿ ಮಗೂ, ಶರತ್‌ಗೆ ಬರಹೇಳು'' ಎನ್ನುತ್ತಿದ್ದರು. ನಾನು ಮಹಾರಾಜರ ಹಿಂದೆಯೇ ಹೋಗಿ, ವರಾಂಡದಲ್ಲಿ ನಿಂತು ಎಲ್ಲವನ್ನೂ ನೋಡುತ್ತಿದ್ದೆ. ಶ್ರೀಮಾತೆಯವರ ಕೋಣೆಯ ಬಾಗಿಲು ಚಿಕ್ಕದಾಗಿತ್ತು. ಮಹಾರಾಜರದು ದೊಡ್ಡ ದೇಹ. ಅವರಿಗೆ ನೇರವಾಗಿ ಒಳಗೆ ಪ್ರವೇಶಿಸುವುದು ಸಾಧ್ಯವಾಗುತ್ತಿರಲಿಲ್ಲ. ಅದಕ್ಕೆ ಓರೆಯಾಗಿ ಒಳಗೆ ಹೋಗುತ್ತಿದ್ದರು. ಶ್ರೀಮಾತೆ ತಮ್ಮ ಮಂಚದಲ್ಲಿ ಕುಳಿತು, ಎರಡೂ ಪಾದಗಳನ್ನು ನೆಲದ ಮೇಲೆ ಇಡುತ್ತಿದ್ದರು. ಮಹಾರಾಜ್ ಮೊಣಕಾಲು ಬಾಗಿಸಿ ನೆಲದಲ್ಲಿ ಕುಳಿತು, ಶ್ರೀಮಾತೆಯವರ ಶ್ರೀಚರಣಗಳಲ್ಲಿ ತಲೆಯನ್ನಿಟ್ಟು ಪ್ರಣಾಮ ಮಾಡುತ್ತಿದ್ದರು. ಆಗ ಶ್ರೀಮಾತೆ ತಮ್ಮ ಎರಡೂ ಕೈಗಳನ್ನು ಅವರ ತಲೆಯ ಮೇಲಿಟ್ಟು ಆಶೀರ್ವಾದ ಮಾಡುತ್ತಿದ್ದರು. ಬಳಿಕ ಮಹಾರಾಜ್ ಕೇಳುತ್ತಿದ್ದರು, ''ಅಮ್ಮಾ, ನೀವು ಚೆನ್ನಾಗಿದ್ದೀರಾ?'' ಅದಕ್ಕೆ ಶ್ರೀಮಾತೆ, ''ಹೌದು ಮಗೂ, ನಾನು ಚೆನ್ನಾಗಿದ್ದೇನೆ. ನೀನು ಚೆನ್ನಾಗಿದ್ದೀಯಾ?'' ಎನ್ನುತ್ತಿದ್ದರು. ''ಹೌದಮ್ಮಾ, ನಾನು ಚೆನ್ನಾಗಿದ್ದೇನೆ'' ಎಂದು ಮಹಾರಾಜ್ ಉತ್ತರಿಸುತ್ತಿದ್ದರು. ಪ್ರತಿದಿನವೂ ಅದೇ ಪ್ರಶ್ನೆ, ಅದೇ ಉತ್ತರವನ್ನು ನಾನು ಕೇಳುತ್ತಿದ್ದೆ. ಪ್ರಣಾಮ ಮಾಡಿದ ನಂತರ ಮಹಾರಾಜ್ ನಿಧಾನವಾಗಿ ಎದ್ದು, ಶ್ರೀಮಾತೆಯವರತ್ತ ಬೆನ್ನು ಮಾಡದೆ, ಹಿಂದೆ ಹಿಂದೆ ಬರುತ್ತ, ಕೋಣೆಯಿಂದ ಹೊರಗೆ ಬಂದು, ನಂತರ ತಿರುಗಿ ನಿಂತು, ಬೈಠಕ್‌ಖಾನೆಯತ್ತ ಹೋಗುತ್ತಿದ್ದರು. ಶ್ರೀಮಾತೆ ಮುಖಕ್ಕೆ ಸೆರಗು ಸುತ್ತಿಕೊಂಡಿರುತ್ತಿದ್ದರು. ಅದಕ್ಕಾಗಿ ಮಹಾರಾಜ್ ''ನಾನು ಅವರ ಮಾವನೋ ಎಂಬಂತೆ ನನ್ನ ಮುಂದೆ ಕೂಡ ಸೆರಗು ಹಾಕಿಕೊಳ್ಳುತ್ತಾರೆ!'' ಎಂದು ಹೇಳುತ್ತಿದ್ದರು.

ಇತ್ತೀಚೆಗೆ ಎಷ್ಟೋ ಮಂದಿ ಭಕ್ತರು ಏನೇನೋ ನಂಬಲು ಅಸಾಧ್ಯವಾದ ಕಥೆಗಳನ್ನು ಹೇಳುತ್ತಾರೆ. ಅದನ್ನು ಕೇಳಿದಾಗ ನನಗೆ ನಗು ಬರುತ್ತದೆ. ಯಾರುಯಾರೋ ನನ್ನನ್ನು ಕೇಳುತ್ತಾರೆ, ''ಶ್ರೀಮಾತೆ ಕೊರಳಲ್ಲಿ ಚಿನ್ನದ ಹಾರ, ಕತ್ತಿನ ಹಿಂದುಗಡೆ ಸಿಂಧೂರ ಧರಿಸುತ್ತಿದ್ದರೆ?'' ಆಗ ನಾನು ಅವರಿಗೆ ಹೇಳುತ್ತೇನೆ, ''ಅದೆಲ್ಲ ಉತ್ಪ್ರೇಕ್ಷೆಯ ಮಾತುಗಳು, ನಿಜವಲ್ಲ. ಶ್ರೀಮಾತೆ ಕೈಯಲ್ಲಿ ಬಂಗಾರದ ಬಳೆಯನ್ನಷ್ಟೇ ಧರಿಸುತ್ತಿದ್ದರು. ಕತ್ತಿನಲ್ಲಿ ಚಿನ್ನದ ತೆಳು ದಾರದಿಂದ ಪೋಣಿಸಿದ ರುದ್ರಾಕ್ಷಿಯ ಮಾಲೆಯನ್ನು ಧರಿಸುತ್ತಿದ್ದರು, ಅಷ್ಟೇ.'' ಕೇಶವಾನಂದ ಸ್ವಾಮಿಗಳ (ಪೂರ್ವಾಶ್ರಮದ) ಪತ್ನಿ ಶ್ರೀಮಾತೆಯವರ ದೇಹಕ್ಕೆ ಎಣ್ಣೆ ಹಚ್ಚಿ ಕೊಡುತ್ತಿದ್ದರು. ನಾನು ಅವರಿಗೆ ಈ ಕುರಿತು ಕೇಳಿದ್ದೆ. ಆಗ ಅವರು, ''ಅದೆಲ್ಲ ಉತ್ಪ್ರೇಕ್ಷೆಯ ಮಾತು'' ಎಂದಿದ್ದರು. ಆಗ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಮಾಧವಾನಂದಜಿ ಹೇಳುತ್ತಿದ್ದರು, ''ಶ್ರೀಮಾತೆಯವರ ಶಿಷ್ಯ, ಶಿಷ್ಯೆಯರ ಮಾತುಗಳನ್ನು ತುಸು ಉಪ್ಪುಖಾರ ಹಚ್ಚಿ ಹೇಳಿದ್ದಾರೆಂದೇ ಭಾವಿಸಬೇಕು. ಅವರು ಏನಾದರೂ ಇಲ್ಲದ್ದನ್ನು ಸೇರಿಸಿಯೇ ಹೇಳುತ್ತಾರೆ.'' ನಾನು ಶ್ರೀಮಾತೆಯವರ ತಲೆಯಿಂದ ಬಿಳಿ ಕೂದಲನ್ನು ಕಿತ್ತು ಕೊಡುತ್ತಿದ್ದೆ. ಎಂದಿಗೂ ಅವರ ಕತ್ತಿನ ಹಿಂಭಾಗದಲ್ಲಿ ಸಿಂಧೂರವನ್ನು ನೋಡಿಲ್ಲ.


ಶ್ರೀರಾಮಕೃಷ್ಣ ಪುಂಥಿ ಕಾವ್ಯದ ಕರ್ತೃ ಶ್ರೀಮಾನ್ ಅಕ್ಷಯ ಕುಮಾರ ಸೇನ್ ಹೇಳುತ್ತಿದ್ದರು: ''ನೋಡು ತಮ್ಮಾ! ಠಾಕೂರರು ನನ್ನ ಗುರು ಹಾಗೂ ಇನ್ನೇನೋ, ಎಲ್ಲವೂ ಆಗಿದ್ದರು. ಆದರೂ ಶ್ರೀಮಾತೆಯವರದು ಎಂಥ ಪ್ರೀತಿಯೆಂದರೆ, ಶ್ರೀರಾಮಕೃಷ್ಣರ ನೆನಪು ಇನ್ನೂರು ಬಾರಿ ಆದರೆ, ಶ್ರೀಮಾತೆಯವರ ನೆನಪು ಸಾವಿರ ಸಲ ಆಗುತ್ತದೆ. ಶ್ರೀರಾಮಕೃಷ್ಣರು ಪ್ರಚಂಡ ಸೂರ್ಯ; ಶ್ರೀಮಾತೆ ಸುಸ್ನಿಗ್ಧ ಚಂದ್ರ. ಆದರೆ ತಮ್ಮಾ, ಇಂಥ ಪ್ರೇಮಮಯಿ ಜನನಿ ಕೂಡಾ ಪ್ರಾರಬ್ಧದ ಮೇಲೆ ಕೈಯಾಡಿಸಲಾರರು. ಅದರ ಪರಿಣಾಮವನ್ನು ಈ ದೇಹ ಅನುಭವಿಸಲೇಬೇಕಾಗುವುದು.'' ಅದಾದ ಮೇಲೆ ಅವರು ಒಂದು ಘಟನೆಯನ್ನು ವಿವರಿಸಿದರು:

''ಒಂದು ದಿನ ನಾನು ಮತ್ತು ಉಮೇಶ ಡಾಕ್ಟರ್ ಶ್ರೀಮಾತೆಯವರ ದರ್ಶನ ಪಡೆಯಲು ಹೋಗಿದ್ದೆವು. ಏನೇನೋ ಮಾತುಕತೆಗಳ ನಡುವೆ ಶ್ರೀಮಾತೆ ತಮ್ಮ ಸಹಜ, ಸರಳ ಭಾವದಿಂದ ತಮ್ಮ ಬೆರಳಿನ ತುದಿಯನ್ನು ತೋರಿಸುತ್ತ, ಅಕ್ಷಯನಿಗೆ ಇಳಿವಯಸ್ಸಿನಲ್ಲಿ ಒಂದಿಷ್ಟು ಕಷ್ಟ ಅನುಭವಿಸಬೇಕಾಗುವುದು ಎಂದರು. ಆಗ ನನಗೆ ಏನೂ ಅರ್ಥವಾಗಿರಲಿಲ್ಲ. ಅನಂತರ ಮನೆಗೆ ಹೋಗಿ ಕುಳಿತು ಕೊಂಡು ಆಲೋಚಿಸಿದಂತೆಲ್ಲ ನನ್ನ ಜೀವ ಚಿಂತೆಯಿಂದ ಒದ್ದಾಡ ತೊಡಗಿತು. ಎರಡು, ಮೂರು ದಿನಗಳ ನಂತರ ಉಮೇಶ ಡಾಕ್ಟರ್ ಶ್ರೀಮಾತೆಯವರ ದರ್ಶನ ಪಡೆಯಲು ಹೋದ. ನಾನು ಅವನ ಮೂಲಕ ಹೇಳಿ ಕಳುಹಿಸಿದೆ, 'ಶ್ರೀಮಾತೆಯವರ ಬಳಿಗೆ ಹೋಗಿ ಹೇಳು, ನನ್ನ ಕೊನೆಗಾಲದಲ್ಲಿ ಕಷ್ಟವಾಗುವುದು ಎಂದು ತಿಳಿದು ನನಗೆ ತುಂಬಾ ಚಿಂತೆಯಾಗುತ್ತಿದೆ. ಅದು ನಿವಾರಣೆಯಾಗುವಂತೆ ಶ್ರೀಮಾತೆಯವರು ಆಶೀರ್ವಾದ ಮಾಡಬೇಕು' ಎಂಬುದಾಗಿ. ಅದನ್ನು ಕೇಳಿ ಶ್ರೀಮಾತೆ, 'ತುಸು ಕಷ್ಟವೇನೋ ಆಗುವುದಷ್ಟೇ' ಎಂದಿದ್ದರು. 'ಅದು ಆಗಲಾರದು' ಎಂದು ಅವರು ಹೇಳಲಿಲ್ಲ. ಆ 'ತುಸು ಕಷ್ಟ'ವೆಂದರೆ ಎಂಥದು ಎಂಬುದು ನಿನಗೆ ಗೊತ್ತೇ ಇದೆ.'' ಅಕ್ಷಯ ಕುಮಾರ ಸೇನ್ ಕೊನೆಗಾಲದಲ್ಲಿ ತುಂಬಾ ಕಷ್ಟ ಅನುಭವಿಸಿದರು. ಆದರೆ ಅವರು ಹಗಲೂ ರಾತ್ರಿ ಯಾವಾಗಲಾದರೂ ಸರಿ, ಠಾಕೂರರ ಅಥವಾ ಶ್ರೀಮಾತೆಯವರ ಮಾತನ್ನು ಬಿಟ್ಟು ಬೇರೆ ಏನನ್ನೂ ಆಡುತ್ತಿರಲಿಲ್ಲ. ನನ್ನೊಂದಿಗೆ ಹಲವು ಮಾತುಗಳನ್ನು ಆಡುತ್ತ ಅವರು ಹೇಳುತ್ತಿದ್ದರು, ''ಈಗ ನೀನು ಇದನ್ನು ಕೇಳಿಸಿಕೋ. ಶ್ರೀಮಾತೆ ಕೃಪೆ ಮಾಡಿದ್ದಾರೆ ಎಂದ ಮೇಲೆ, ಒಂದು ದಿನ ನಿನಗೆ ಸಾಕ್ಷಾತ್ಕಾರ ಉಂಟಾಗಿಯೇ ತೀರುವುದು. ಆಗ ನಿನಗೆ ತಿಳಿದೀತು, ಹೌದು, ಮುದುಕ ಇದನ್ನು ಸರಿಯಾಗಿಯೇ ಹೇಳಿದ್ದಾನೆ ಅಂತ.''*

*(ಸಮಾಪ್ತಿ)*

*(* ಸ್ವಾಮಿ ಪೂರ್ಣಾತ್ಮಾನಂದರು ಸಂಗ್ರಹಿಸಿದ ಟೇಪ್‌ರೆಕಾರ್ಡಿಂಗ್ ಸ್ಮೃತಿಚಿತ್ರವಿದು. 'ಶತರೂಪೇ ಶಾರದಾ' ಎಂಬ (ಬಂಗಾಳಿ) ಗ್ರಂಥದಲ್ಲಿ ಇದು ಅಡಕವಾಗಿದೆ.)*

## ಯುವಚೇತನ



''ಜಗತ್ತಿನ ಇತಿಹಾಸವು ಇಂತಹ ಆರು ಜನ ಶ್ರದ್ಧಾಳುಗಳ ಮೇಲೆ, ಆರು ಜನ ಶುದ್ಧ ಚಾರಿತ್ರ್ಯವುಳ್ಳವರ ಮೇಲೆ ನಿಂತಿದೆ. ನಮಗೆ ಅವಶ್ಯವಿರುವುದು ಮೂರು ಸಾಧನಗಳು: ಅನುಭವಿಸುವ ಹೃದಯ, ಯೋಚಿಸುವ ಮಿದುಳು, ಕೆಲಸ ಮಾಡುವುದಕ್ಕೆ ಕೈಗಳು. ನಿಮ್ಮನ್ನು ನೀವೇ ಒಂದು ಅದ್ಭುತ ಶಕ್ತಿಯ ಕೇಂದ್ರವಾಗಿರಿಸಿಕೊಳ್ಳಿ. ಮೊಟ್ಟ ಮೊದಲಾಗಿ ಪ್ರಪಂಚದ ಮೇಲೆ ಅನುಕಂಪವಿರಲಿ... ನಿಮ್ಮ ಮನಸ್ಸು ದ್ವೇಷ ಮತ್ತು ಅಸೂಯೆಯ ಭಾವನೆಗಳಿಂದ ಪ್ರತಿಕ್ರಿಯಿಸುತ್ತಿದೆಯೇ ಎಂದು ನಿಮ್ಮನ್ನು ನೀವೇ ಪ್ರಶ್ನಿಸಿಕೊಳ್ಳಿ. ಕಾರಣ ಈ ಜಗತ್ತಿನ ಮೇಲೆ ಜನರು ಸುರಿಸುತ್ತಿರುವ ಟನ್ನುಗಟ್ಟಲೆ ದ್ವೇಷ, ಕೋಪಗಳಿಂದ ಒಳ್ಳೆಯ ಕೆಲಸಗಳೆಲ್ಲ ಹಾಳಾಗುತ್ತಿದೆ. ನೀವು ಪರಿಶುದ್ಧರಾಗಿದ್ದರೆ, ಧೀರರಾಗಿದ್ದರೆ, ನೀವು ಒಬ್ಬರೇ ಇಡೀ ಜಗತ್ತಿಗೆ ಸರಿಸಾಟಿ.''

*(ಕೃತಿಶ್ರೇಣಿ, ಸಂ.೭, ಪು.೨೪೮)*